ದಿನಾಂಕ 08.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2. ದಿನಾಂಕ 21.09.2022 ರಂದು ನಾನು ಮತ್ತು ಪ್ರಾಸಾ 7 ರವರು 112 ಕರ್ತವ್ಯದಲ್ಲಿದ್ದು, ಸಂಜೆ 7.15 ರ ಸಮಯದಲ್ಲಿ ಒಂದು ಫೋನ್ ಕರೆ ಬಂದಿದ್ದು, ಕರೆ ಬಂದ ಸ್ಥಳಕ್ಕೆ ನಾವು ಹೋದಾಗ ಅಲ್ಲಿ ಶಿವು ಎಂಬ ವ್ಯಕ್ತಿ ಇದ್ದು, ತಾನೇ 112 ಗೆ ಕರೆ ಮಾಡಿದ್ದು, ಎಂದು ಹೇಳಿ ರಘು ಮತ್ತು ನಾಗೇಶ್ ನನ್ನು ತೋರಿಸಿ ಇವರು ತಮ್ಮ ಜಮೀನಿನಲ್ಲಿ ತೆಗದ ಮರಗಳನ್ನು ಕಡಿದು ಟ್ರ್ಯಾಕ್ಟರ್ ನಲ್ಲಿ ತುಂಬಿರುತ್ತಾರೆ ಎಂದು ತೋರಿಸಿದರು. ಆಗ ನಾವು ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ಅದರಲ್ಲಿ ತುಂಬಿರುವ ಮರಗಳ ಸಮೇತ ಅಕ್ಕೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಒಪ್ಪಿಸಿರುತ್ತೇನೆ .ಸದರಿ ರಘು ಮತ್ತು ನಾಗೇಶನನ್ನು ನೋಡಿ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳು ಆಗಿರುತ್ತಾರೆ.

3. ಸದರಿ ಮರದ ದಿಮ್ಮಿಗಳನ್ನು ತುಂಬಿದಂತಹ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಇರುವಂತಹ 4 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿ 12 ರಿಂದ 15 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ.ಕೆಸಿಎಂ., ವಕೀಲರ ಪರವಾಗಿ ಶ್ರೀಮತಿ.ಎಲ್.ಬಿ. ವಕೀಲರಿಂದಃ**

4. 112 ಸಂಖ್ಯೆಗೆ ಕರೆ ಬಂದಾಗ ಸಂಜೆ ಸುಮಾರು 7.15 ರ ಸಮಯವಾಗಿತ್ತು. ಕರೆ ಬಂದಾಗ ನೀವು ಎಲ್ಲಿಂದ ಕರೆ ಬಂದಿರುತ್ತದೆ ಹಾಗು ಯಾರು ಕರೆ ಮಾಡಿದ್ದು ಎಂದು ತಿಳಿದುಕೊಂಡಿರಾ ಎಂಬ ಪ್ರಶ್ನೆಗೆ ಸಾಕ್ಷಿ ಕರೆ ಬಂದಾಗ ನಮ್ಮ ಬಳಿ ಇರುವಂತಹ ಟ್ಯಾಬ್‌ಗೆ ಕರೆ ಮಾಡಿದವರ ಮೊಬೈಲ್ ಸಂಖ್ಯೆ ಅದರಲ್ಲಿ ಬಿಂಬಿಸುತ್ತದೆ, ಅದರ ಮೂಲಕ ಎಲ್ಲಿಂದ ಕರೆ ಬಂದಿದೆ ಎಂದು ನಮಗೆ ಗೊತ್ತಾಗುತ್ತದೆ, ಆಗ ನಾವು ಕರೆ ಬಂದ ಸಂಖ್ಯೆಗೆ ನಾವೇ ಕರೆ ಮಾಡಿ

ಎಲ್ಲಿಗೆ ಬರಬೇಕು ಎಂದು ತಿಳಿದುಕೊಳ್ಳುತ್ತೇವೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ನಮಗೆ ಕರೆ ಬಂದ ತಕ್ಷಣ ನಾವು ಸದರಿ ವ್ಯಕ್ತಿಗೆ ಮರು ಕರೆ ಮಾಡಿರುತ್ತೇವೆ.

5. ನಾವಿದ್ದ ಸ್ಥಳದಿಂದ ಕರೆ ಬಂದ ಜಾಗ ಸುಮಾರು 4 ಕಿ.ಮೀ. ದೂರದಲ್ಲಿದೆ. ಎಷ್ಟು ಮರಗಳನ್ನು ಕಟಾವು ಮಾಡಲಾಗಿತ್ತು ಹಾಗು ಎಷ್ಟು ತೆಗೆದ ತುಂಡುಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಅಲ್ಲಿ ರಘು ಮತ್ತು ನಾಗೇಶ್ ರವರ ಹೆಸರು ಮಾತ್ರ ನಾವು ತಿಳಿದುಕೊಂಡಿದ್ದು, ಉಳಿದ ಜನರ ಹೆಸರು ನನಗೆ ಗೊತ್ತಿಲ್ಲ.

6. ಪಿರ್ಯಾದುದಾರ ಶಿವ ಹೇಳಿದ್ದನ್ನು ಹೊರತುಪಡಿಸಿ ಅಲ್ಲಿ ಇದ್ದವರಿಂದ ನಾವು ಯಾವುದೇ ಮಾಹಿತಿ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಕರೆ ಮಾಡಿದ ವ್ಯಕ್ತಿಯಿಂದ ಮಾತ್ರ ನಮಗೆ ಮಾಹಿತಿ ಪಡೆಯಬೇಕಾಗುತ್ತದೆ ಎಂದು ಉತ್ತರಿಸಿರುತ್ತಾರೆ. ಸ್ಥಳದಲ್ಲಿ ಇನ್ನೂ ಕೆಲವು ಜನರು ಸೇರಿದ್ದರು. ಅವರ ಹೆಸರು ಮಾಹಿತಿಯನ್ನು ನಾವು ಪಡೆದುಕೊಂಡಿಲ್ಲ. ಸ್ಥಳಕ್ಕೆ ಹೋದಂತಹ ಸಮಯದಲ್ಲಿ ಅಲ್ಲಿನ ವಸ್ತು ಸ್ಥಿತಿಯನ್ನು ಗಮನಿಸಿ ಅಲ್ಲಿ ಇದ್ದಂತಹ ವ್ಯಕ್ತಿಗಳ ಮಾಹಿತಿಯನ್ನು ಕೊಡಬಹುದಾಗಿತ್ತು ಎಂದರೆ ಸಾಕ್ಷಿ ಘಟನೆಗೆ ಸಂಬಂಧಿಸಿದಂತ ವಿಚಾರವನ್ನು ಮಾತ್ರ ನಾವು ಠಾಣೆಯಲ್ಲಿ ತಿಳಿಸಿರುತ್ತೇವೆ. ಆ ರೀತಿ ವಿಷಯ ತಿಳಿದುಕೊಂಡು ಮಾಹಿತಿ ನೀಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕಿಷ್ಷಿ ಅಲ್ಲಿ ಗಲಾಟೆ ನಡೆಯುತ್ತಿದ್ದ ಕಾರಣ ನಮಗೆ ಆದಷ್ಟು ಬೇಗ ಟ್ರ್ಯಾಕ್ಟರ್ ನ್ನು ಠಾಣೆಗೆ ತಂದು ಒಪ್ಪಿಸಬೇಕಾಗಿತ್ತು ಎಂದು ಉತ್ತರಿಸಿರುತ್ತಾರೆ.

7. ಶಿವು ಮತ್ತು ನಾಗೇಶ್ ರವರ ನಡುವೆ ಚನ್ನಪಟ್ಟಣ ನ್ಯಾಯಾಲಯದಲ್ಲಿ ಸಿವಿಲ್ ದಾವಾ ದಾಖಲಾಗಿರುವ ಬಗ್ಗೆ ನಮಗೆ ತಿಳಿಸಿರಲಿಲ್ಲ. ನಾಗೇಶ್ ಮತ್ತು ರಘು ಇವರೇ ಎಂದು ಖಚಿತ ಪಡಿಸಲು ನಾವು ಅವರ ಗುರುತಿನ ಚೀಟಿಯನ್ನು ಪಡೆದುಕೊಳ್ಳಲಿಲ್ಲ. ಅಲ್ಲಿ ಇದ್ದಂತಹ ಜನರನ್ನು ಕೇಳಿ ಅವರು ನಾಗೇಶ್ ಮತ್ತು ರಘು ಎಂಬುವುದನ್ನು ಖಚಿತ ಪಡಿಸಿಕೊಂಡೆವು. ಮುಖ್ಯರಸ್ತೆಯಿಂದ ಕೃತ್ಯ ನಡೆದಿದೆ ಎಂದು ಹೇಳುವ ಜಾಗ ಎಷ್ಟು

ದೂರದಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಹೋಗುವಷ್ಟರಲ್ಲಿ ಟ್ರ್ಯಾಕ್ಟರ್ ನ್ನು ರಸ್ತೆಯ ಕಡೆಗೆ ತಂದಾಗಿತ್ತು ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಜಮೀನು ಯಾರಿಗೆ ಸಂಬಂಧಿಸಿದ್ದು ಎಂದು ದಾಖಲಾತಿಯನ್ನು ನಾವು ಪರಿಶೀಲಿಸಿರುವುದಿಲ್ಲ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ, ಶಿವು ಮತ್ತು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**